# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 153 |
| ಮಾನ್ಯ ಸದಸ್ಯರ ಹೆಸರು | ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 11-08-2025 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

<table>
<tr><th>ಕ್ರ.<br>ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ಆಯುಷ್ ಇಲಾಖೆಯಲ್ಲಿ ಮೂರು ವರ್ಷಕ್ಕೂ ಮೇಲ್ಪಟ್ಟು ಒಂದೇ ಹುದ್ದೆಯಲ್ಲಿ ಹಾಗೂ ಒಂದೇ ಜಿಲ್ಲೆಯಲ್ಲಿ ಎಷ್ಟು ಜಿಲ್ಲಾ ಆಯುಷ್ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ; (ಜಿಲ್ಲಾವಾರು ವಿವರ ನೀಡುವುದು)</td><td>ಆಯುಷ್ ಇಲಾಖೆಯಲ್ಲಿ ಮೂರು ವರ್ಷಕ್ಕೂ ಮೇಲ್ಪಟ್ಟು ಒಂದೇ ಹುದ್ದೆಯಲ್ಲಿ ಹಾಗೂ ಒಂದೇ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಜಿಲ್ಲಾ ಆಯುಷ್ ಅಧಿಕಾರಿಗಳ ಜಿಲ್ಲಾವಾರು ವಿವರಗಳು ಈ ಕೆಳಕಂಡಂತೆ ಇರುತ್ತವೆ.
<table>
<tr><th>ಕ್ರ.<br>ಸಂ.</th><th>ಅಧಿಕಾರಿಗಳ ಹೆಸರು ಮತ್ತು ಪದನಾಮ</th><th>ಕರ್ತವ್ಯ ನಿರ್ವಹಿಸುತ್ತಿರುವ ಜಿಲ್ಲೆಯ ಹೆಸರು</th></tr>
<tr><td>1</td><td>ಡಾ. ಮಹಮದ್ ಇಕ್ಬಾಲ್. ಕೆ.<br>ಹಿರಿಯ ವೈದ್ಯಾಧಿಕಾರಿಗಳು</td><td>ಜಿಲ್ಲಾ ಆಯುಷ್ ಕಛೇರಿ,<br>ದಕ್ಷಿಣ ಕನ್ನಡ</td></tr>
<tr><td>2</td><td>ಡಾ. ಗೀತಾಎಸ್.<br>ಹಿರಿಯ ವೈದ್ಯಾಧಿಕಾರಿಗಳು</td><td>ಜಿಲ್ಲಾ ಆಯುಷ್ ಕಛೇರಿ,<br>ಚಿಕ್ಕಮಗಳೂರು</td></tr>
<tr><td>3</td><td>ಡಾ. ವಂದನಾ ಗಾಳಿಯವರ್<br>ಹಿರಿಯ ವೈದ್ಯಾಧಿಕಾರಿಗಳು</td><td>ಜಿಲ್ಲಾ ಆಯುಷ್ ಕಛೇರಿ,<br>ಯಾದಗಿರಿ</td></tr>
<tr><td>4</td><td>ಡಾ. ಗುರುಬಸವರಾಜಸಿ.<br>ನಿಡಗುಂದಿ,<br>ವೈದ್ಯಾಧಿಕಾರಿಗಳು</td><td>ಜಿಲ್ಲಾ ಆಯುಷ್ ಕಛೇರಿ,<br>ಹಾವೇರಿ</td></tr>
<tr><td>5</td><td>ಡಾ. ಎಸ್.ಬಿ. ಸುಣದೋಳಿ<br>ವೈದ್ಯಾಧಿಕಾರಿಗಳು</td><td>ಜಿಲ್ಲಾ ಆಯುಷ್ ಕಛೇರಿ,<br>ಬೆಳಗಾವಿ</td></tr>
<tr><td>6</td><td>ಡಾ. ಸತೀಶ್ ಆಚಾರ್ಯ<br>ವೈದ್ಯಾಧಿಕಾರಿಗಳು</td><td>ಜಿಲ್ಲಾ ಆಯುಷ್ ಕಛೇರಿ,<br>ಉಡುಪಿ</td></tr>
</table></td></tr>
<tr><td>ಆ)</td><td>ಸದರಿ ಜಿಲ್ಲಾ ಆಯುಷ್ ಅಧಿಕಾರಿಗಳಿಗೆ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ವೈದ್ಯಾಧಿಕಾರಿಗಳು ಮತ್ತು ಇತರೆ ಸಿಬ್ಬಂದಿಗಳ ವರ್ಗಾವಣೆ ನಿಯಂತ್ರಣ) ಅಧಿನಿಯಮ 2011 ಮತ್ತು 2025 ರ ನಿಯಮ ಸಾರ್ವಜನಿಕ ಹಿತಾಸಕ್ತಿಯನ್ವಯದಡಿ ಕೂಡಲೇ ವರ್ಗಾವಣೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;</td><td rowspan="2">ಆಯುಷ್ ಇಲಾಖೆಯಲ್ಲಿ ಜಿಲ್ಲಾ ಆಯುಷ್ ಅಧಿಕಾರಿಗಳ ಹುದ್ದೆಗಳು ಗ್ರೂಪ್'ಎ 'ವೃಂದಕ್ಕೆ ಸೇರಿದ ಆಡಳಿತಾತ್ಮಕ ಹುದ್ದೆಗಳಾಗಿದ್ದು, ಸದರಿ ಹುದ್ದೆಗಳು ಈ ಇಲಾಖೆಯ ವರ್ಗಾವಣೆ ಅಧಿನಿಯಮ ಮತ್ತು ಕಾಯ್ದೆಯ ವ್ಯಾಪ್ತಿಗೊಳಪಡದೇ ಇರುವುದರಿಂದ, ಕೌನ್ಸಿಲಿಂಗ್ ಮುಖಾಂತರ ವರ್ಗಾವಣೆ ಮಾಡಲು ಅವಕಾಶವಿರುವುದಿಲ್ಲ.<br><br>ಸರ್ಕಾರದ ಆದೇಶ ಸಂಖ್ಯೆ: ಆಕುಕ 185 ಪಿಐಎಂ 2025, ದಿನಾಂಕ: 19.05.2025 ರಲ್ಲಿ ಜಿಲ್ಲಾ ಆಯುಷ್ ಅಧಿಕಾರಿ ಹುದ್ದೆಗಳನ್ನು ಭರ್ತಿ ಮಾಡಲು ಕೆಲವೊಂದು ಮಾನದಂಡಗಳನ್ನು ನಿಗದಿಪಡಿಸಲಾಗಿರುತ್ತದೆ. ಅದರನ್ವಯ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: ಆಯುಷ್/44/ಸಿಬ್ಬಂದಿ(3)/2025, ದಿನಾಂಕ:21-05-2025 ರಲ್ಲಿ ಜಿಲ್ಲಾ ಆಯುಷ್ ಅಧಿಕಾರಿಗಳ ಹುದ್ದೆಗೆ ಆಸಕ್ತ ಅಧಿಕಾರಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ ಮತ್ತು ನಿರ್ದೇಶನಾಲಯದ ಪತ್ರ ದಿನಾಂಕ: 14-08-2025 ರಲ್ಲಿ ಜಿಲ್ಲಾ ಆಯುಷ್ ಅಧಿಕಾರಿಗಳ ಹುದ್ದೆಗಳಿಗೆ ಅರ್ಜಿ ಸಲ್ಲಿಸಿರುವ ಅರ್ಜಿದಾರರು ತಮ್ಮ ಸೇವಾವಧಿಯಲ್ಲಿ ಮಾಡಿರುವ ಅಭಿವೃದ್ಧಿ</td></tr>
<tr><td>ಇ)</td><td>ಒಂದೇ ಜಿಲ್ಲೆಯಲ್ಲಿ ಕಳೆದ 5 ವರ್ಷಕ್ಕೂ ಹೆಚ್ಚು ಕಾರ್ಯ ನಿರ್ವಹಿಸುತ್ತಿರುವ ಜಿಲ್ಲಾ ಆಯುಷ್ ಅಧಿಕಾರಿಗಳನ್ನು ಕೂಡಲೇ ಸರ್ಕಾರ ವರ್ಗಾವಣೆ ಮಾಡಲು ಕ್ರಮ ಕೈಗೊಳ್ಳುವುದೇ;</td></tr>
</table>

| | | |
|---|---|---|
| | | ಸಾಧನೆಗಳನ್ನು ಒಂದು ಪುಟದಲ್ಲಿ ಪಟ್ಟಿ ಮಾಡಿ ತಮ್ಮ ತಮ್ಮ ಸಂಸ್ಥೆಯ/ ಕಛೇರಿಯ ಮುಖ್ಯಸ್ಥರಿಂದ ದೃಢೀಕರಿಸಿ ಸಲ್ಲಿಸುವಂತೆ ಸೂಚಿಸಲಾಗಿರುತ್ತದೆ. ಅದರಂತೆ ಅರ್ಜಿದಾರರಿಂದ ಮಾಹಿತಿ / ದಾಖಲೆಗಳು ಸ್ವೀಕೃತಗೊಂಡಿದ್ದು, ಈ ಎಲ್ಲಾ ಮಾಹಿತಿಗಳನ್ನು ಕ್ರೂಢೀಕರಿಸಿ, ಪ್ರಸ್ತುತ ಚಾಲ್ತಿಯಲ್ಲಿರುವ ಆಯುಷ್ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ಹಾಗೂ ಜಿಲ್ಲಾ ಆಯುಷ್ ಅಧಿಕಾರಿ ಹುದ್ದೆಗೆ ನಿಗದಿಪಡಿಸಲಾಗಿರುವ ಮಾನದಂಡಗಳ ಪ್ರಕಾರ ಪರಿಶೀಲನೆ ಮಾಡಿ, ಅರ್ಹ ವೈದ್ಯಾಧಿಕಾರಿಗಳ ಪಟ್ಟಿಯನ್ನು ಸಿದ್ದಪಡಿಸುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. |
| ಈ) | ಕಳೆದ 5 ವರ್ಷಗಳಿಂದ ಕಳಪೆ ಗುಣಮಟ್ಟದ ಔಷಧಿಗಳನ್ನು ಟೆಂಡರ್ ಕರೆಯದೆ ಖರೀದಿ ಮಾಡಿರುವ ಜಿಲ್ಲಾ ಆಯುಷ್ ಅಧಿಕಾರಿಗಳ ವಿರುದ್ಧ ಸರ್ಕಾರ ಏನು ಕ್ರಮಕೈಗೊಂಡಿದೆ; | ಆಯುಷ್ ಸಂಯುಕ್ತ ಆಸ್ಪತ್ರೆ ಮಂಗಳೂರು ಇಲ್ಲಿಗೆ MRPL ಸಂಸ್ಥೆಯು CSR ರಡಿ ಒದಗಿಸಲಾದ ಅನುದಾನದಲ್ಲಿ 2023-24ನೇ ಸಾಲಿನಲ್ಲಿ ಸಾಧನೋಪಕರಣಗಳನ್ನು ಖರೀದಿಸಲು ಕೈಗೊಂಡ ಖರೀದಿ ಪ್ರಕ್ರಿಯೆಯಲ್ಲಿ KTPP ನಿಯಮಗಳನ್ನು ಪಾಲಿಸದಿರುವ ಬಗ್ಗೆ ಮತ್ತು ಖರೀದಿ ಪ್ರಕ್ರಿಯೆಯ ಪೂರ್ವದಲ್ಲಿ ಆರೋಗ್ಯ ರಕ್ಷಾ ಸಮಿತಿಯ ಅನುಮೋದನೆ / ಘಟನೋತ್ತರ ಮಂಜೂರಾತಿ ಪಡೆಯದೆ ಖರೀದಿಸಿರುವ ಆರೋಪಕ್ಕೆ ಸಂಬಂಧಿಸಿದಂತೆ ಆಯುಕ್ತರು, ಆಯುಷ್ ಇಲಾಖೆ ಇವರಿಂದ ದಿನಾಂಕ 28.11.2025 ರಂದು ಸ್ವೀಕೃತವಾಗಿರುವ ವರದಿಯನ್ನು ಪರಿಶೀಲಿಸಿ ಡಾ. ಮಹಮ್ಮದ್ ಇಕ್ಬಾಲ್, ಜಿಲ್ಲಾ ಆಯುಷ್ ಅಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರನ್ವಯ ಸದರಿಯವರಿಗೆ ದೋಷಾರೋಪಣಾ ಪಟ್ಟಿ (ಅನುಬಂಧ ರಿಂದ 4) ಯನ್ನು ಜಾರಿಗೊಳಿಸಲಾಗಿದ್ದು (ಅನುಬಂಧ ಸದರಿಯವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. |
| ಉ) | ಆಯುಷ್ ಇಲಾಖೆಯ ಕಡತ ಸಂಖ್ಯೆ: ಆಕುಕ 184 ಪಿಟಿಡಿ 2024ರ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದ್ದರೂ ಕಳೆದ ಒಂದು ವರ್ಷದಲ್ಲಿ ಸದರಿ ಜಿಲ್ಲಾ ಆಯುಷ್ ಅಧಿಕಾರಿಗಳ ವಿರುದ್ಧ ಯಾವುದೇ ಕ್ರಮಗಳನ್ನು ಕೈಗೊಳ್ಳದೇ ಇರಲು ಕಾರಣವೇನು? | |

ಸಂಖ್ಯೆ:ಆಕುಕ 282 ಪಿಟಿಡಿ2025

(ದಿನೇಶ್ ಗುಂಡೂರಾವ್)
ಆರೋಗ್ಯಮತ್ತುಕುಟುಂಬಕಲ್ಯಾಣಸಚಿವರು

Speed post

**ಕರ್ನಾಟಕ ಸರ್ಕಾರ**

ಸಂಖ್ಯೆ: ಆಕುಕ 451 ಪಿಐಎಂ 2025
ದೋಷಾರೋಪಣಾ ಪಟ್ಟಿ

ಕರ್ನಾಟಕ ಸರ್ಕಾರದ ಸಚಿವಾಲಯ,
1ನೇ ಮಹಡಿ, ವಿಕಾಸಸೌಧ,
ಬೆಂಗಳೂರು, ದಿನಾಂಕ:06.12.2025.

**ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ-11ರಡಿಯಲ್ಲಿ ಕಾರಣ ಕೇಳುವ ಸೂಚನಾ ಪತ್ರ**

ಡಾ. ಮಹಮ್ಮದ್ ಇಕ್ಬಾಲ್, ಜಿಲ್ಲಾ ಆಯುಷ್ ಅಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ ಆದ ನಿಮ್ಮ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957ರ ನಿಯಮ 11ರ ಪ್ರಕಾರ ಶಿಸ್ತಿನ ಕ್ರಮ ಜರುಗಿಸಲು ಉದ್ದೇಶಿಸಲಾಗಿದೆ.

ಕ್ರಮ ಜರುಗಿಸಲು ಕಾರಣವಾದ ಆರೋಪಗಳನ್ನು ದುರ್ನಡತೆಯ ವಿವರಣೆಯನ್ನು, ಆರೋಪಗಳನ್ನು ಸಾಬೀತುಪಡಿಸಬಲ್ಲ ದಾಖಲೆಗಳ ಪಟ್ಟಿಯನ್ನು ಹಾಗೂ ಆರೋಪಗಳನ್ನು ಸಾಬೀತುಪಡಿಸಬಲ್ಲ ಸಾಕ್ಷಿಗಳ ಪಟ್ಟಿಯನ್ನು ಇದರ ಜೊತೆ ಅನುಬಂಧ- 1, 2, 3 ಹಾಗೂ 4 ಎಂದು ಗುರುತಿಸಲಾಗಿದೆ.

ಈ ನೋಟೀಸ್ ಜಾರಿಯಾದ 15 ದಿನಗಳೊಳಗಾಗಿ ಆರೋಪಗಳ ಬಗ್ಗೆ ನಿಮ್ಮ ರಕ್ಷಣಾ ಹೇಳಿಕೆಯನ್ನು ಲಿಖಿತ ಮೂಲಕ ಸರ್ಕಾರಕ್ಕೆ ಕಳುಹಿಸಲು ನಿಮಗೆ ಅವಕಾಶ ನೀಡಲಾಗಿದೆ ಹಾಗೂ ನಿಮ್ಮ ಹೇಳಿಕೆಯನ್ನು ಮೌಖಿಕವಾಗಿ ಹೇಳಲು ಬಯಸುತ್ತೀರಾ ಅಥವಾ ಇಲ್ಲವೇ ಎಂದು ತಿಳಿಸುವಂತೆ ಸೂಚಿಸಲಾಗಿದೆ.

ನೀವು ಒಪ್ಪಿಕೊಳ್ಳದೇ ಇರುವ ಆರೋಪಗಳ ಬಗ್ಗೆ ಮಾತ್ರ ವಿಚಾರಣೆ ನಡೆಸಲಾಗುವುದರಿಂದ, ನೀವು ಆರೋಪವನ್ನು ಸ್ಪಷ್ಟವಾಗಿ ಒಪ್ಪಿಕೊಳ್ಳಬೇಕು, ಇಲ್ಲವೇ ತಿರಸ್ಕರಿಸಬೇಕೆಂದು ತಿಳಿಸಲಾಗಿದೆ.

ನಿಮ್ಮ ರಕ್ಷಣಾ ಹೇಳಿಕೆಯನ್ನು ಲಿಖಿತವಾಗಿ ನಿಗದಿಪಡಿಸಿದ ಅವಧಿಯೊಳಗೆ 'ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸ ಸೌಧ, ಬೆಂಗಳೂರು' ಇವರಿಗೆ ಸಲ್ಲಿಸುವುದು. ಹೀಗೆ ಸಲ್ಲಿಸದಿದ್ದಲ್ಲಿ, ಈ ವಿಷಯದಲ್ಲಿ ನಿಮ್ಮ ಹೇಳಿಕೆ ಏನೂ ಇಲ್ಲವೆಂದು ಭಾವಿಸಿ, ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಗಳು, 1957 ರ ನಿಯಮಗಳ ಪ್ರಕಾರ ಮುಂದಿನ ಕ್ರಮವನ್ನು ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಸ್ವೀಕರ ಬಾ.ಸ ಪತ್ರ ಹೊರಡಿಸಿದೆ.
ದಿನಾಂಕ :- 08.12.2025
ಸಹಿ :-

(ಶ್ರೀಪತಿ ಪಿ.ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾವ್ಯೆಪ ಮತ್ತು ಸಮನ್ವಯ).

ಇವರಿಗೆ:
ಡಾ. ಮಹಮ್ಮದ್ ಇಕ್ಬಾಲ್,
ಜಿಲ್ಲಾ ಆಯುಷ್ ಅಧಿಕಾರಿ,
ದಕ್ಷಿಣ ಕನ್ನಡ ಜಿಲ್ಲೆ,
ಮಂಗಳೂರು. - 575001



File No. HFW/446/PTD/2025-IMD-HEALTH AND FAMILY WELFARE SEC (Computer No. 1978640)
Generated from eOffice by VEENA HEGDE, AAO EST AYUSH, ASSISTANT ADMINISTRATIVE OFFICER, DIRECTORATE OF AYUSH on 08/12/2025 12:0

**ಡಾ. ಮಹಮ್ಮದ್ ಇಕ್ಬಾಲ್, ಜಿಲ್ಲಾ ಆಯುಷ್ ಅಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ ಇವರ ಮೇಲಿನ ಆರೋಪಗಳ ಕುರಿತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ-11ರ ಮೇರೆಗೆ ದೋಷಾರೋಪಣೆ ಪಟ್ಟಿ:**

**ಅನುಬಂಧ-1**

**1. ದೋಷಾರೋಪಣೆ**

**ಆರೋಪ-1:-**

ನೀವು ಆಯುಷ್ ಸಂಯುಕ್ತ ಆಸ್ಪತ್ರೆ, ಮಂಗಳೂರು ಇಲ್ಲಿಗೆ ಸಾಧನೋಪಕರಣ ಖರೀದಿಗಾಗಿ MRPL ಸಂಸ್ಥೆಯವರು CSR ಅಡಿಯಲ್ಲಿ ಒದಗಿಸಲಾದ ₹ 38,50.544/- ಗಳ ಅನುದಾನದಲ್ಲಿ ₹ 21,72,266/- ಗಳ ವೆಚ್ಚದ OT Equipment ಖರೀದಿ ಮತ್ತು ₹6.75.312/- ಗಳ ವೆಚ್ಚದ Laboratory Equipment ಖರೀದಿಯಲ್ಲಿ ₹5.00 ಲಕ್ಷಗಳ ಮೇಲ್ಪಟ್ಟ ಖರೀದಿಗೆ ಖರೀದಿ ನಿಯಮಗಳನ್ನು ಪಾಲಿಸದೇ ಈ ಕೆಳಕಂಡಂತೆ KTPP ನಿಯಮಗಳನ್ನು ಉಲ್ಲಂಘಿಸಿರುತ್ತೀರಿ.

**CHAPTER II - REGULATION OF PROCUREMENT**

5. **Procurement other than by Tender Prohibited:-** On and from the date of commencement of this Act no Procurement Entity shall procure goods or services except by inviting Tenders for supply.

6. **Procurement Entities to follow Procedure:-** No tender shall be invited, processed or accepted by a Procurement Entity after the commencement of this Act except in accordance with the procedure laid down in this Act or the rules made there under.

7. **The Karnataka Public Procurement Portal:-**

(1) The State Government shall set up and maintain a State Public Procurement Portal accessible to the public for posting and exhibiting matters relating to public procurement.

(2) Every procurement under this Act shall be carried out through the Karnataka Public Procurement Portal..

(3) Each procuring entity shall cause the procurement related information to be exhibited as required under this Act or the Rules made there under on the portal referred to in sub Section (1).

**12. Duties of Tender Inviting Authority:-**

c. to cause publication of notice inviting tenders in the prescribed manner on the Karnataka Public Procurement Portal;"]

d. to make available Tender Documents to every intending tenderer on the Karnataka Public Procurement Portal. .

**ಆರೋಪ-2**:-

ಆಯುಷ್ ಸಂಯುಕ್ತ ಆಸ್ಪತ್ರೆ ಮಂಗಳೂರು ಇಲ್ಲಿಗೆ ಸಾಧನೋಪಕರಣ ಖರೀದಿಗಾಗಿ MRPL ಸಂಸ್ಥೆಯವರು CSR ಅಡಿಯಲ್ಲಿ ಒದಗಿಸಲಾದ ₹ 38,50,544/- ಗಳ ಅನುದಾನದಲ್ಲಿ ಖರೀದಿ ಪ್ರಕ್ರಿಯೆಕೈಗೊಳ್ಳುವ ಪೂರ್ವದಲ್ಲಿ ಮತ್ತು ಸರಬರಾಜು ಆದೇಶ ನೀಡುವ ಪೂರ್ವದಲ್ಲಿ ಆರೋಗ್ಯ ರಕ್ಷಾ ಸಮಿತಿಯ ಅನುಮೋದನೆ/ಘಟನೋತ್ತರ ಮಂಜೂರಾತಿ ಪಡೆದಿರುವುದಿಲ್ಲ.

ಆರೋಗ್ಯ ರಕ್ಷಾ ಸಮಿತಿಯ By Laws ನ Delegation of Financial Powers ನ ಅನುಸಾರ ಕೇವಲ ಆರೋಗ್ಯ ರಕ್ಷಾ ಸಮಿತಿಗೆ ಮಾತ್ರ ಪೂರ್ಣ ಅಧಿಕಾರ ಇದ್ದು, ₹38,50,544/- ಗಳ ಮೊತ್ತದ ಖರೀದಿಯನ್ನು ಆರೋಗ್ಯ ರಕ್ಷಾ ಸಮಿತಿಯ ಯಾವುದೇ ಅನುಮೋದನೆ/ ಘಟನೋತ್ತರ ಮಂಜೂರಾತಿ ಪಡೆಯದೇ ಮಾಡಿರುತ್ತೀರಿ.

ಸಾರ್ವಜನಿಕರಿಗೆ ಪ್ರಾಮಾಣಿಕವಾಗಿ ಸೇವೆ ಒದಗಿಸುವ ಜವಾಬ್ದಾರಿ ಹೊಂದಿರುವ ನೀವು ಕರ್ತವ್ಯ ನಿರ್ಲಕ್ಷ್ಯತನದಿಂದ ವರ್ತಿಸಿ ಗಂಭೀರವಾದ ಕರ್ತವ್ಯ ಲೋಪ ಎಸಗುವ ಮೂಲಕ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 2021 ರ ನಿಯಮ 3ನ್ನು ಉಲ್ಲಂಘಿಸಿರುತ್ತೀರಿ. ಆದ್ದರಿಂದ ಈ ಆರೋಪ.

(ಶ್ರೀಪತಿ ಪಿ.ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾಷ್ಯೆಪ ಮತ್ತು ಸಮನ್ವಯ).



File No HFW/446/PTD/2025-IMD-HEALTH AND FAMILY WELFARE SEC (Computer No. 1978640)
Generated from eOffice by VEENA HEGDE, AAO EST AYUSH, ASSISTANT ADMINISTRATIVE OFFICER, DIRECTORATE OF AYUSH on 09/12/2025 12:0

## 2. ಡಾ. ಮಹಮ್ಮದ್ ಇಕ್ಬಾಲ್, ಜಿಲ್ಲಾ ಆಯುಷ್ ಅಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ ಇವರ ಮೇಲಿನ ಆರೋಪಗಳ ಕುರಿತ ದೋಷಾರೋಪಣೆಯನ್ನು ಉತ್ತೇಜಿಸಬಲ್ಲ ಅಂಶಗಳು:

### ಅನುಬಂಧ-2

**ಆರೋಪ-1:-**

ನೀವು ಆಯುಷ್ ಸಂಯುಕ್ತ ಆಸ್ಪತ್ರೆ, ಮಂಗಳೂರು ಇಲ್ಲಿಗೆ ಸಾಧನೋಪಕರಣ ಖರೀದಿಗಾಗಿ MRPL ಸಂಸ್ಥೆಯವರು CSR ಅಡಿಯಲ್ಲಿ ಒದಗಿಸಲಾದ ₹ 38,50,544/- ಗಳ ಅನುದಾನದಲ್ಲಿ ₹ 21.72.266/-ಗಳ ವೆಚ್ಚದ OT Equipment ಖರೀದಿ ಮತ್ತು ₹6,75,312/- ಗಳ ವೆಚ್ಚದ Laboratory Equipment ಖರೀದಿಯಲ್ಲಿ ₹5.00 ಲಕ್ಷಗಳ ಮೇಲ್ಪಟ್ಟು ಖರೀದಿಗೆ ಖರೀದಿ ನಿಯಮಗಳನ್ನು ಪಾಲಿಸದೇ ಈ ಕೆಳಕಂಡಂತೆ KTPP ನಿಯಮಗಳನ್ನು ಉಲ್ಲಂಘಿಸಿರುತ್ತಾರೆ.

**CHAPTER II - REGULATION OF PROCUREMENT**

5. **Procurement other than by Tender Prohibited:-** On and from the date of commencement of this Act no Procurement Entity shall procure goods or services except by inviting Tenders for supply.

6. **Procurement Entities to follow Procedure:-** No tender shall be invited, processed or accepted by a Procurement Entity after the commencement of this Act except in accordance with the procedure laid down in this Act or the rules made there under.

7. **The Karnataka Public Procurement Portal:-**
(1) The State Government shall set up and maintain a State Public Procurement Portal accessible to the public for posting and exhibiting matters relating to public procurement.

(2) Every procurement under this Act shall be carried out through the Karnataka Public Procurement Portal.

(3) Each procuring entity shall cause the procurement related information to be exhibited as required under this Act or the Rules made there under on the portal referred to in sub Section (1).

**12. Duties of Tender Inviting Authority:-**

c. to cause publication of notice inviting tenders in the prescribed manner on the Karnataka Public Procurement Portal;"]

d. to make available Tender Documents to every intending tenderer on the Karnataka Public Procurement Portal.



File No. HFW/446/PTD/2025-IMD-HEALTH AND FAMILY WELFARE SEC (Computer No. 1978640)
Generated from eOffice by VEENA HEGDE, AAO EST AYUSH, ASSISTANT ADMINISTRATIVE OFFICER, DIRECTORATE OF AYUSH on 09/12/2025 12:0

**ಆರೋಪ-2:-**

ಆಯುಷ್ ಸಂಯುಕ್ತ ಆಸ್ಪತ್ರೆ ಮಂಗಳೂರು ಇಲ್ಲಿಗೆ ಸಾಧನೋಪಕರಣ ಖರೀದಿಗಾಗಿ MRPL ಸಂಸ್ಥೆಯವರು CSR ಅಡಿಯಲ್ಲಿ ಒದಗಿಸಲಾದ ₹38,50,544/- ಗಳ ಅನುದಾನದಲ್ಲಿ ಖರೀದಿ ಪ್ರಕ್ರಿಯೆಕೈಗೊಳ್ಳುವ ಪೂರ್ವದಲ್ಲಿ ಮತ್ತು ಸರಬರಾಜು ಆದೇಶ ನೀಡುವ ಪೂರ್ವದಲ್ಲಿ ಆರೋಗ್ಯ ರಕ್ಷಾ ಸಮಿತಿಯ ಅನುಮೋದನೆ / ಘಟನೋತ್ತರ ಮಂಜೂರಾತಿ ಪಡೆದಿರುವುದು ಕಂಡು ಬಂದಿರುವುದಿಲ್ಲ.

ಆರೋಗ್ಯ ರಕ್ಷಾ ಸಮಿತಿಯ By Laws ನ Delegation of Financial Powers ನ ಅನುಸಾರ ಕೇವಲ ಆರೋಗ್ಯ ರಕ್ಷಾ ಸಮಿತಿಗೆ ಮಾತ್ರ ಪೂರ್ಣ ಅಧಿಕಾರ ಇದ್ದು, ₹38,50,544/- ಗಳ ಮೊತ್ತದ ಖರೀದಿಯನ್ನು ಆರೋಗ್ಯ ರಕ್ಷಾ ಸಮಿತಿಯ ಯಾವುದೇ ಅನುಮೋದನೆ / ಘಟನೋತ್ತರ ಮಂಜೂರಾತಿ ಪಡೆಯದೇ ಮಾಡಿರುತ್ತಾರೆ.

ಸಾರ್ವಜನಿಕರಿಗೆ ಪ್ರಾಮಾಣಿಕವಾಗಿ ಸೇವೆ ಒದಗಿಸುವ ಜವಾಬ್ದಾರಿ ಹೊಂದಿರುವ ನೀವು ಕರ್ತವ್ಯ ನಿರ್ಲಕ್ಷ್ಯತನದಿಂದ ವರ್ತಿಸಿ ಗಂಭೀರವಾದ ಕರ್ತವ್ಯ ಲೋಪ ಎಸಗುವ ಮೂಲಕ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 2021 ರ ನಿಯಮ 3ನ್ನು ಉಲ್ಲಂಘಿಸಿರುತ್ತಾರೆ. ಆದ್ದರಿಂದ ಈ ಆರೋಪ.

(ಶ್ರೀಪತಿ ಪಿ.ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾಮೈಪ ಮತ್ತು ಸಮನ್ವಯ).



ile No. HFW/446/PTD/2025-IMD-HEALTH AND FAMILY WELFARE SEC (Computer No. 1978640)
enerated from eOffice by VEENA HEGDE, AAO EST AYUSH, ASSISTANT ADMINISTRATIVE OFFICER, DIRECTORATE OF AYUSH on 09/12/2025 12:0

**ಡಾ. ಮಹಮ್ಮದ್ ಇಕ್ಬಾಲ್, ಜಿಲ್ಲಾ ಆಯುಷ್ ಅಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ ಇವರ ಮೇಲಿನ ಆರೋಪಗಳ ಕುರಿತು ದೋಷಾರೋಪಣೆಯನ್ನು ಸಾಬೀತುಪಡಿಸಲು ಇರುವ <u>ದಾಖಲೆಗಳು:</u>**

## ಅನುಬಂಧ-3

1. MRPL ಸಂಸ್ಥೆಯವರು ₹38,51,000/- ಅನುದಾನ ಅನುಮೋದನೆ ಮಾಡಿರುವ ಬಗ್ಗೆ ದಿ.17/06/2023 ರಂದು ನೀಡಿರುವ Letter of intent.
2. ಆರೋಗ್ಯ ರಕ್ಷಾ ಸಮಿತಿಯ By Laws ನ ಕಂಡಿಕೆ (7) ರಲ್ಲಿ ತಿಳಿಸಿದ Delegation of Financial Powers to the executive committee.
3. ₹38,50,554/-ಗಳ ವೆಚ್ಚದ ಒಟ್ಟು ಬಿಲ್‌ಗಳ ಘೋಷ್ವಾರೆ ಮತ್ತು ಬಿಲ್‌ಗಳ ಪ್ರತಿ.
4. KTPP, 1999 (As amended by Act 21 of 2001, 4 of 2003,13 of 2007,20 of 2015, 31 of 2017, 06 of 2019, 12 of 2020, 19 of 2021 and 23 of 2023) ಕಾಯ್ದೆಯ ಪ್ರತಿ.
5. ಜಿಲ್ಲಾಧಿಕಾರಿ, ದಕ್ಷಿಣಕನ್ನಡ ಜಿಲ್ಲೆ, ಇವರ ಕಂಡಿಕೆ (11) ಕಡತ ಸಂಖ್ಯೆ: ಜಿಆಅದಕಮಂ: 77/ಸಿಬ್ಬಂದಿ/2022-23.
6. ದಿನಾಂಕ 15/06/2024 ರಂದು ಆಯುಕ್ತರು, ಆಯುಷ್ ಸೇವೆಗಳು, ಬೆಂಗಳೂರು ಇವರ ತನಿಖಾ ವರದಿ.
7. ಪ್ರಧಾನ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು ಕರ್ನಾಟಕ ಸರ್ಕಾರ ಇವರ ಕಂಡಿಕೆ(20), ಕಡತ ಸಂಖ್ಯೆ: ಜಿಆಅದಕಮಂ:77/ ಸಿಬ್ಬಂದಿ/2022-23.

6/12

**(ಶ್ರೀಪತಿ ಪಿ.ಕೆ.)**
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾವೈಪ ಮತ್ತು ಸಮನ್ವಯ).



File No. HFW/446/PTD/2025-IMD-HEALTH AND FAMILY WELFARE SEC (Computer No. 1978640)
Generated from eOffice by VEENA HEGDE, AAO EST AYUSH, ASSISTANT ADMINISTRATIVE OFFICER, DIRECTORATE OF AYUSH on 09/12/2025 12:0

## ಅನುಬಂಧ-4

**ಡಾ. ಮಹಮ್ಮದ್ ಇಕ್ಬಾಲ್, ಜಿಲ್ಲಾ ಆಯುಷ್ ಅಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ ಇವರ ಮೇಲಿನ ದೋಷಾರೋಪಣೆಯನ್ನು ಸಮರ್ಥಿಸಲು ಒದಗಿಸಿರುವ ಸಾಕ್ಷಿದಾರರ ಪಟ್ಟಿ**

1. ಡಾ. ಮಹಮ್ಮದ್ ರಫೀ ಹೆಚ್. ಹಕೀಮ್,
ಮುಖ್ಯ ಯೋಜನೆ ಮತ್ತು ಅಭಿವೃದ್ಧಿ ಅಧಿಕಾರಿಗಳು,
ಆಯುಷ್ ಇಲಾಖೆ, ಬೆಂಗಳೂರು.

2. ಡಾ. ಅಶ್ವಥನಾರಾಯಣ,
ಉಪನಿರ್ದೇಶಕರು (ಹೋ) ಹಾಗೂ ವಿಭಾಗೀಯ ನೋಡಲ್ ಅಧಿಕಾರಿಗಳು,
ಆಯುಷ್ ಇಲಾಖೆ, ಬೆಂಗಳೂರು.

3. ವಿಚಾರಣೆ ಸಮಯದಲ್ಲಿ ಅವಶ್ಯಕವೆನಿಸುವ ಇತರೆ ಸಾಕ್ಷಿಗಳು.

6/12

**(ಶ್ರೀಪತಿ ಪಿ.ಕೆ.)**
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾವೈಪ ಮತ್ತು ಸಮನ್ವಯ).



File No. HFW/446/PTD/2025-IMD-HEALTH AND FAMILY WELFARE SEC (Computer No. 1978640)
Generated from eOffice by VEENA HEGDE, AAO-EST-AYUSH, ASSISTANT ADMINISTRATIVE OFFICER, DIRECTORATE OF AYUSH on 09/12/2025 12:0